# ಮನೆಯೇ ಗ್ಯಾರೇಜ್

ಗಣಪತಿ ಹಾಸ್ಪುರ



ಅದು ಕೇರಿ ಊರಲ್ಲ. ಅಂಗಡಿಮುಂಗಟ್ಟುಗಳು ಅಲ್ಲಿಲ್ಲ. ಹೇಳಿಕೊಳ್ಳುವಷ್ಟು ಜನದಟ್ಟಣೆಯಾಗಲೀ, ಅಧಿಕ ವಾಹನ ಸಂಚಾರವಾಗಲೀ ಇಲ್ಲ. ಸುತ್ತಮುತ್ತೆಲ್ಲ ಹಸಿರಿನಿಂದ ಕಂಗೊಳಿಸುವ ಕಾಡು, ಗದ್ದೆಅಡಿಕೆ ತೋಟದ ಸೊಬಗು. ಅಂಥ ಕುಗ್ರಾಮದಲ್ಲಿ ಯಂತ್ರ ರಿಪೇರಿ ಮಾಡುವ ಗ್ಯಾರೇಜ್ ಇದೆ! ಈ ಗ್ಯಾರೇಜ್ ಆ ಊರಿನ ವೈಶಿಷ್ಟ್ಯವಾಗಿದ್ದು ಇದೀಗ ಆಕರ್ಷಣೆಯ ಕೇಂದ್ರವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಉಮ್ಮಚ್ಗಿ ಸಮೀಪದ 'ಸೂರಬೈಲ್'ನಲ್ಲಿ ಈ ಗ್ಯಾರೇಜ್ ಇದೆ. ಕಳೆದ ಐದು ವರ್ಷಗಳಿಂದ ಇಲ್ಲಿ ಗ್ಯಾರೇಜ್ ಕಾರ್ಯ ನಿರ್ವಹಿಸುತ್ತಿದ್ದು; ಉತ್ತಮ ಸೇವೆಯನ್ನು ನೀಡುತ್ತಾ ಜನಪ್ರಿಯವಾಗಿದೆ. ಎಲ್ಲ ತರದ ಬೈಕ್ ಸೇರಿದಂತೆ ಕೃಷಿ ಕೆಲಸಗಳಿಗೆ ಉಪಯೋಗಿಸುತ್ತಿರುವ ವಿವಿಧ ಯಂತ್ರಗಳನ್ನು ಇಲ್ಲಿ ರಿಪೇರಿ ಮಾಡುತ್ತಿರುವುದು ವಿಶೇಷ.

ಸೂರಬೈಲ್‌ನ ಶಂಕರ ಪೂಜಾರಿ ಮಗ ರಾಘವೇಂದ್ರನಿಗೆ ಏನಾದರೂ ಕೆಲಸ ಮಾಡಬೇಕೆಂಬ ಆಸೆಯಿತ್ತು. ಮನೆಯಲ್ಲಿಯೂ ಅಷ್ಟೇನು ಅನುಕೂಲ ಇರಲಿಲ್ಲ. ಹತ್ತವರು ಇರುವ ಅಲ್ಪ ಗದ್ದೆಯನ್ನು ಸಾಗುವಳಿ ಮಾಡಿಕೊಂಡು ಜೀವನದ ನಿರ್ವಹಣೆಗೆ ಕೂಲಿ ಕೆಲಸವನ್ನೇ ಅವಲಂಬಿಸಿಕೊಂಡಿದ್ದರು. ಹೀಗಾಗಿ ರಾಘು ಪೂಜಾರಿ ಅವರಿಗೆ ಕೆಲಸ ಮಾಡುವುದು ಅನಿವಾರ್ಯವೇ ಆಗಿತ್ತು. 'ಬೈಕ್ ರಿಪೇರಿ' ಕಾರ್ಯದಲ್ಲಿ ಹೆಚ್ಚಿನ ಒಲುವನ್ನು ಹೊಂದಿದ್ದ ಸೂರಬೈಲ್‌ನ ರಾಘವೇಂದ್ರ, ಆ ಕೆಲಸವನ್ನು ಕಲಿಯಲು ಉತ್ಸಾಹ ತೋರಿದರು. ಅಂತೆಯೇ ಅವರು ಕುಂದಾಪುರ ಮತ್ತು ಯಲ್ಲಾಪುರದಲ್ಲಿ ಬೇರೆಯವರ ಗ್ಯಾರೇಜ್‌ನಲ್ಲಿದ್ದು ಬೈಕ್ ರಿಪೇರಿ ಮಾಡುವ ಕೆಲಸವನ್ನು ರೂಢಿಸಿಕೊಂಡರು.

ಆ ಕೆಲಸವನ್ನು ಕಲಿಯುವುದು ಚಿಟಿಕೆ ಹೊಡೆದಷ್ಟು ಸುಲಭವಲ್ಲ. ಒಂದೇ ದಿನದಲ್ಲಿ ರೂಢಿ ಮಾಡಿಕೊಳ್ಳುವ ಕೆಲಸವೂ ಅದಲ್ಲ. ರಿಪೇರಿ ಕೆಲಸವನ್ನು ಕರಗತವಾಗಿ ಅಭ್ಯಾಸ ಮಾಡುವವನಿಗೆ ತಾಳ್ಮೆ, ಧೈರ್ಯ, ಛಲದೊಂದಿಗೆ ತಾಕತ್ತು ಇರಬೇಕು. ತನ್ನ ಬುದ್ಧಿ ಶಕ್ತಿಯಿಂದ ಬೈಕ್‌ನ ಭಾಗಗಳನ್ನು ಬಿಚ್ಚಿ, ಜೋಡಿಸುವ ಕೌಶಲ್ಯವೂ ಬೇಕು. ಅದಕ್ಕೆ ದೀರ್ಘ ಸಮಯವೇ ಬೇಕು. ಬೇರೆಯವರ ಕೈಕೆಳಗಿದ್ದು ಆ ಕೆಲಸವನ್ನು ರೂಢಿಸಿಕೊಳ್ಳುತ್ತಿದ್ದ ಇವರಿಗೆ ದುಃಖವಾದರೂ ಸಹಿಸಿಕೊಂಡರು. ಪ್ರತಿಯೊಂದು ಬೈಕ್‌ನ ವಿವಿಧ ಭಾಗ, ಅದರ ಜೋಡಿಸುವ ವಿಧಾನ, ಬೈಕಿನ ಸಮಸ್ಯೆಯನ್ನು ತಿಳಿದುಕೊಳ್ಳುವ ಚಾಣಾಕ್ಷತನ, ಅದನ್ನು ಬಗೆಹರಿಸುವ ಕೌಶಲ್ಯ.... ಹೀಗೆ ಪ್ರತಿಯೊಂದನ್ನು ಲಕ್ಷ್ಯ ಕೊಟ್ಟು ಅವನ್ನು ಮನನ ಮಾಡಿಕೊಂಡರು. ಬೈಕ್ ರಿಪೇರಿ ಕೆಲಸವನ್ನು ಕರಗತವಾಗಿ ರೂಢಿಸಿಕೊಂಡ ರಾಘು ಪೂಜಾರಿ ಅವರಿಗೆ, ತಾನೇ ಸ್ವಂತ ಗ್ಯಾರೇಜ್ ಹಾಕಬಹುದು ಎಂಬ ಧೈರ್ಯ ಬಂದಿತ್ತು. ಆಮೇಲೆ, ಉಮ್ಮಚ್ಗಿ ಪೇಟೆಯಲ್ಲಿ 'ಶ್ರೀರಾಮ ಅಟೋವರ್ಕ್ಸ್' ಎಂಬ ಹೆಸರಿನಲ್ಲಿ ಸ್ವಂತ ಗ್ಯಾರೇಜ್‌ನ್ನು ಆರಂಭಿಸಿದರು.

ಈ ಗ್ಯಾರೇಜ್ ಇರುವ ಸ್ಥಳ ಜನದಟ್ಟಣೆವುಳ್ಳ ಕೇಂದ್ರವಾಗಿತ್ತು. ಶಿರಸಿ ಯಲ್ಲಾಪುರ ರಾಜ್ಯ ಹೆದ್ದಾರಿಯೂ ಗ್ಯಾರೇಜ್‌ನ ಎದುರಿನಲ್ಲಿಯೇ ಹಾದು ಹೋಗಿದ್ದರಿಂದ, ವಾಹನ ಸಂಚಾರವೂ ಹೆಚ್ಚಿತ್ತು. ಉಮ್ಮಚ್ಗಿಯ ಪುಟ್ಟ ನಗರದಲ್ಲಿ ರಾಘವೇಂದ್ರ ಪೂಜಾರಿ ಅವರ 'ಬೈಕಿನ ವರ್ಕ್ ಸೇಫ್' ಇದ್ದಿದ್ದರಿಂದ ಬೈಕಿನ ರಿಪೇರಿಗಾಗಿ ವಾಹನದ ಸವಾರರು ಬರುತ್ತಿದ್ದರು. ಅದು ರಿಪೇರಿ ಮಾಡುವ ಅಂಗಡಿ ಆಗಿದ್ದರಿಂದ ನಿಗದಿತ ಸಮಯಕ್ಕೆ ಬಾಗಿಲು ತೆರೆಯುವುದು, ಊಟದ ಸಮಯದಲ್ಲಿ ಬಾಗಿಲು ಹಾಕುವ ಪದ್ಧತಿ ರೂಢಿಯಾಗಿತ್ತು. ಊರಿನಲ್ಲಿ ಆಗಷ್ಟೇ ಧರ್ಮಸ್ಥಳದ ಸಂಘ ಹೆಚ್ಚು ಕ್ರಿಯಾಶೀಲವಾಗಿತ್ತು. ಆ ಸಂಘದ ಸದಸ್ಯರಾಗಿದ್ದ ಸೂರಬೈಲ್‌ನ ರಾಘು, ವಾರಕ್ಕೊಮ್ಮೆ ಸಂಘದ ಕೆಲಸಕ್ಕೆಂದು ಹೋದಾಗ ಮಾತ್ರವೇ ಈ ಗ್ಯಾರೇಜ್ ಬಾಗಿಲು ಮುಚ್ಚಿಕೊಂಡು ಇರುತ್ತಿತ್ತು. ಇನ್ನುಳಿದ ಸಮಯದಲ್ಲಿ ಶ್ರದ್ಧೆಯಿಂದ ಸೇವೆ ನೀಡುತ್ತಿದ್ದರು.

ಉಮ್ಮಚ್ಗಿಯಲ್ಲಿ ನಿರಂತರ ಮೂರು ವರ್ಷಗಳ ಕಾಲ ಸ್ವತಂತ್ರವಾಗಿ ಬೈಕ್ ರಿಪೇರಿ ಕಾರ್ಯದಲ್ಲಿ ಮಗ್ನರಾಗಿದ್ದ ರಾಘು ಉತ್ತಮ ಹಿಡಿತ ಸಾಧಿಸಿದ್ದರು. ಚೆನ್ನಾಗಿ ರಿಪೇರಿ ಕೆಲಸ, ಇಂಜಿನ್ ಕೆಲಸ ಮಾಡುತ್ತಿದ್ದರಿಂದ, ಅವರನ್ನು ಹುಡುಕಿಕೊಂಡು ಬರುವ ಕಾಯಂ ಗ್ರಾಹಕರು ಇದ್ದಿದ್ದರು. ಅವರಿಗೆ ಮೆಕ್ಯಾನಿಕಲ್ ದಂಧೆ ಸಂತೃಪ್ತಿ ನೀಡಿತ್ತು. ಅದನ್ನು ಮುಂದುವರೆಸಿಕೊಂಡು ಹೋದರೆ ಜೀವನೋಪಾಯಕ್ಕೆ ತೊಂದರೆಯಿಲ್ಲಾ ಎಂಬುದು ಮನದಟ್ಟಾದಾಗ, ಗ್ಯಾರೇಜ್ ಉದ್ಯೋಗದಲ್ಲಿಯೇ ಮುಂದುವರಿಯಲು ಇಚ್ಛಿಸಿದರು.

## ಮನೆಗೆ ಸ್ಥಳಾಂತರ

ರಾಘವೇಂದ್ರ ಪೂಜಾರಿ ಅವರಿಗೆ ಪ್ರತಿನಿತ್ಯ ಮನೆಯಿಂದ ಉಮ್ಮಚ್ಗಿಗೆ (ಸುಮಾರು ನಾಲ್ಕು ಕಿ. ಮೀ. ದೂರ) ಬಂದು ಹೋಗುವುದೇ ಸಮಸ್ಯೆ! ಅದನ್ನು ಬಿಟ್ಟರೇ ಉದ್ಯೋಗದಲ್ಲಾಗಲೀ, ಗ್ರಾಹಕರ ಕಿರಿಕಿರಿ ಸಮಸ್ಯೆ; ತೊಂದರೆ ತೊಡಕಾಗಲಿ ಇರಲಿಲ್ಲ. ಒಮ್ಮೆ ಹೀಗೆ ಅನ್ನಿಸಿತ್ತು.... ಮನೆಯಲ್ಲಿ ಗ್ಯಾರೇಜ್‌ನ್ನು ಆರಂಭಿಸಿದ್ರೇ, ರಿಪೇರಿ ಕೆಲಸವಿಲ್ಲದ ಸಮಯದಲ್ಲಿ ಮನೆಯ ಕೆಲಸವನ್ನು ಮಾಡಬಹುದೆಂಬ ವಿಚಾರ ಹೊಳೆದಿತ್ತು. ಆ ವಿಷಯವನ್ನು ಗಂಭೀರವಾಗಿ ಯೋಚಿಸಿ.... ಸೂಕ್ತ ಸಂದರ್ಭದಲ್ಲಿ ಹೆಜ್ಜೆ ಇಟ್ಟರು. ಅದರಂತೆಯೇ, ಸುಮಾರು ಐದು ವರ್ಷದ ಹಿಂದೆಯೇ ಉಮ್ಮಚ್ಗಿ ಪೇಟೆಯಿಂದ ಕುಗ್ರಾಮವಾದ ಸೂರಬೈಲ್‌ಗೆ ತಮ್ಮ ಗ್ಯಾರೇಜ್‌ನ್ನು ಶಿಫ್ಟ್ ಮಾಡಿದರು. ರಾಘು ಪೂಜಾರಿ ಅವರು ತಮ್ಮ ಮನೆಯ ಒಂದು ಪಾರ್ಶ್ವದ ಮಾಡಿನಲ್ಲಿ ಬೈಕ್ ರಿಪೇರಿ ಕೆಲಸವನ್ನು ಮುಂದುವರೆಸಿದರು. ಈಗ ಅಂಗಳದ ಜಾಗವೆಲ್ಲ ಗ್ಯಾರೇಜಾಗಿ ಪರಿವರ್ತನೆಯಾಗಿದೆ!

ಇವರು ಹೀರೋ ಹೊಂಡಾ, ಯಮಹ, ಟಿ. ವಿ. ಎಸ್., ಹೀರೋ ಪುಕ್, ಸುಜುಕಿ, ಎಂ. 80.... ಹೀಗೆ ಎಲ್ಲಾ ತರದ ಬೈಕ್‌ನ್ನು ವ್ಯವಸ್ಥಿತವಾಗಿ ರಿಪೇರಿ ಮಾಡುತ್ತಾರೆ. ಬೈಕ್‌ನೊಂದಿಗೆ ಐ. ಬಿ. ಎಕ್ಸ್ ಬ್ಯಾಟರಿ, ವೀಡರ್, ಕೆರೋಸಿನ್ ಪಂಪ್, ಟಿಲ್ಲರ್, ಡಿಸೈಲ್ ಪಂಪ್.... ಇತ್ಯಾದಿ ಕೃಷಿಕರು ಉಪಯೋಗಿಸುವ ಉಪಕರಣಗಳನ್ನು ದುರಸ್ತಿ ಮಾಡುತ್ತಾರೆ. ಸಮಯದ ಸದುಪಯೋಗದ ಜತೆಗೆ ಊರವರಿಗೆ ಉಪಕಾರಿಯಾಗಿರುವುದು ಇವರ ಹೆಚ್ಚುಗಾರಿಕೆ.